ಆ) ೧೯೮೭-೮೮ ರಿಂದ ೧೯೮೯-೯೦ರ ವರೆಗಿನ ಸಣ್ಣ ನೀರಾವರಿ ಇಲಾಖೆಯ ವೆಚ್ಚಗಳು ಈ ಕೆಳಕಂಡಂತಿವೆ.

೧) ೧೯೮೭-೮೮ ರೂ. ೩೩೭೯-೮೦ ಲಕ್ಷಗಳು

೨) ೧೯೮೮-೮೯ ರೂ. ೪೫೭೮-೫೫ ಲಕ್ಷಗಳು

೩) ೧೯೮೯-೯೦ ರೂ. ೩೮೭೭-೨೩ ಲಕ್ಷಗಳು (ಜನವರಿ ೧೯೯೦ರ ಮಾಹಿತಿ ವರೆಗೆ)

ಇ) ಮೇಲ್ಕಂಡ ಮೊತ್ತದಲ್ಲಿ ಸಂಬಳ ಭತ್ಯೆಗಳು ಹಾಗೂ ಇತರೆ ಸಿಬ್ಬಂದಿ ಶಾಖೆಯು ೧೯೮೭-೮೮ ರಿಂದ ೧೯೮೯-೯೦ರ ವರೆಗಿನ ವಿರ್ಚಿನ ಮೊತ್ತಗಳು ಕೆಳಕಂಡಂತಿವೆ.

ಸಾಲು	ಕಾಮಗಾರಿಗಳ ವೆಚ್ಚ	ಸಂಬಳ ಮತ್ತು ಭತ್ಯೆಗಳು	ಇತರೆ ವೆಚ್ಚಗಳು ಪ್ರಯಾಣ ಮತ್ತು ಸಾಧಿಲ್ವಾರಂ ವೆಚ್ಚಗಳು	ಮೊತ್ತ (ಲಕ್ಷಗಳಲ್ಲಿ)
೧೯೮೭-೮೮	೨೭೩೦.೩೯	೬೧೩.೯೨	೩೫.೪೯	೩೩೭೯.೮೦
೧೯೮೮-೮೯	೩೯೮೪.೬೫	೫೬೦.೫೭	೩೩.೩೩	೪೫೭೮.೫೫
೧೯೮೯-೯೦	೩೨೪೯.೨೯	೫೭೨.೨೫	೨೫.೬೯	೩೮೭೭.೨೩

ಬೆಂಗಳೂರು-ಮೈಸೂರು ಮಧ್ಯೆ ''ಎಕ್ಸ್‌ಪ್ರೆಸ್ ಹೈವೇ'' ರಚಿಸುವ ಬಗ್ಗೆ

೧೦೮. ಶ್ರೀ ಎಲ್. ಆರ್. ಶಿವರಾಮೇಗೌಡ. (ನಾಗಮಂಗಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಬೆಂಗಳೂರು-ಮೈಸೂರು ಮಧ್ಯೆ ''ಎಕ್ಸ್‌ಪ್ರೆಸ್ ಹೈವೇ'' ರಚಿಸುವ ಸರ್ಕಾರ ತೀರ್ಮಾನ ಯಾವ ಹಂತದಲ್ಲಿದೆ ?

ಆ) ಮೇಲ್ಕಂಡ ಯೋಜನೆಯ ಯೋಜನಾ ವರದಿ ರಚಿಸಲು ಯಾವ ಸಂಸ್ಥೆಯ ಸಹ ಯೋಗವನ್ನು ಸರ್ಕಾರ ಪಡೆದುಕೊಂಡಿದೆ.

ಇ) ಬೆಂಗಳೂರು-ಮಂಗಳೂರು ಮಧ್ಯೆ ಹಾಸನ ಮಾರ್ಗವಾಗಿ ''ಎಕ್ಸ್‌ಪ್ರೆಸ್ ಹೈವೆ'' ರಚಿಸುವ ಯೋಜನೆ ಸರ್ಕಾರದ ಮುಂದಿದೆಯೆ ?

ಈ) ಹಾಗಿದ್ದಲ್ಲಿ ಈ ಯೋಜನೆಯನ್ನು ಎಂದಿಂದ ಪ್ರಾರಂಭಿಸಲಾಗುವುದೆಂದು ನಿರೀಕ್ಷಿಸಬಹುದು

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೆ ಯನ್ನು ಸುಂಕ ವಸೂಲಿ ಆಧಾರದ ಮೇಲೆ ನಿರ್ಮಾಣ ಮಾಡಲು ಟೆಂಡರನ್ನು ಸ್ವೀಕರಿಸಲಾಗಿದ್ದು ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲ್ಕಂಡ ಯೋಜನಾ ವರದಿ ತಯಾರಿಸಲು ಮೆಸರ್ಸ್ ಇಂಟರ್‌ಕಾಂಟಿನೆಂಟಲ್ ಕನ್ಸಲಿಟೆಂಟ್ಸ್ ಅಂಡ್ ಟೆಕ್ನೊಕ್ರಾಫ್ಟ್ ಲಿ. ಹೊಸದೆಹಲಿ ಯವರನ್ನು ಸಲಹೆಗಾರರಾಗಿ ನೇಮಿಸಲಾಗಿದೆ

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ನೀರಾವರಿ ಬಾಂಡ್‌ಗಳನ್ನು ಜಾರಿಗೆ ತರುವ ಬಗ್ಗೆ

೧೦೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ರಾಜ್ಯದಲ್ಲಿ ನೀರಾವರಿ ಬಾಂಡ್‌ಗಳನ್ನು ಜಾರಿಗೆ ತರಲು ಸರ್ಕಾರವು ಯೋಚಿಸಿದೆಯೇ

ಆ) ಹಾಗಿದ್ದಲ್ಲಿ ಅವುಗಳನ್ನು ಯಾವಾಗ ಜಾರಿಗೆ ತರಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮಂತ್ರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ನೀರಾವರಿ ಬಾಂಡ್‌ಗಳ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸಲು ರಾಷ್ಟ್ರೀಯ ಮಟ್ಟದಲ್ಲಿ ನೀರಾವರಿ ಅಭಿವೃದ್ಧಿ ಬ್ಯಾಂಕ್‌ನ್ನು ಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಆ) ಕೇಂದ್ರ ಸರ್ಕಾರದ ಅನುಮೋದನೆ ಬಂದ ನಂತರ.

ಪ್ರವಾಸೋದ್ಯಮ ಅಭಿವೃದ್ಧಿಗಾಗಿ ವಿದೇಶಿ ನೆರವನ್ನು ಪಡೆದುಕೊಳ್ಳುವ ಕುರಿತು

೨೦೧. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವಾ ಇಲಾಖಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಲು ವಿದೇಶಿ ನೆರವನ್ನು ಕೇಳಲಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಗಳನ್ನು ಯಾವಾಗ ತಯಾರು ಮಾಡಲಾಯಿತು.

ಇ) ಯಾವ ಯಾವ ಪ್ರವಾಸೋದ್ಯಮ ಕೇಂದ್ರಗಳನ್ನು ಈ ವಿದೇಶ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು ?

ಈ) ಯಾವಾಗ ವಿದೇಶಿ ನೆರವು ದೊರೆಯುವ ಸಾಧ್ಯತೆ ಇದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖಾ ಸಚಿವರು).—

ಅ) ಹೌದು

ಆ) ೧೯೮೯-೯೦ರಲ್ಲಿ

ಇ) ಈ ಯೋಜನೆಯು ವಿವಿಧ ರೀತಿಯ ಪ್ರವಾಸಿ ಸೌಲಭ್ಯಗಳನ್ನು ಹೊಂದಿದ್ದು, ಕರ್ನಾಟಕ ದಕ್ಷಿಣ ಮತ್ತು ಉತ್ತರ ಭಾಗ ಹಾಗೂ ಕರಾವಳಿ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುವುದು.

ಈ) ಈ ಯೋಜನೆಯು ಪರಿಶೀಲನೆ ಮತ್ತು ಮಾತುಕತೆಯ ಹಂತದಲ್ಲಿದೆ. ಆದ್ದರಿಂದ ಯಾವಾಗ ನೆರವು ದೊರಕುವುದೆಂದು ಈಗ ಹೇಳಲು ಸಾಧ್ಯವಾಗದು.

ಕಾರಂಜಾ ಜಲಾಶಯದಿಂದ ಮುಳುಗಡೆಯಾದ ರೈತರಿಗೆ ಆಗಿರತಕ್ಕ ತೊಂದರೆಯ ಬಗ್ಗೆ

೧೯೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯ ಕಾರಂಜಾ ಜಲಾಶಯದಿಂದ ಮುಳುಗಡೆಯಾದ ಜಮೀನಿನ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಅವರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಮುಳುಗಡೆಯಾಗುವ ಒಟ್ಟು ೧೪೦೦೭ ಎಕರೆ ಭೂಮಿ ಸ್ವಾಧೀನಪಡಿಸಿ ಪರಿಹಾರ ಧನ ನೀಡಲಾಗಿದೆ. ಮುಳುಗಡೆಯಾಗುವ ಏಳು ಗ್ರಾಮಗಳಿಗೂ ಹೊಸ ಪುನರ್ವಸತಿ ಕೇಂದ್ರಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಹೊಸದಾಗಿ ರಚಿಸಿದ ಪುನರ್ವಸತಿ ಕೇಂದ್ರಗಳಲ್ಲಿ, ರಸ್ತೆಗಳು, ಶಾಲಾ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ, ಬೀದಿ ದೀಪಗಳು, ಪ್ರಾರ್ಥನಾ ಮಂದಿರಗಳು ಮತ್ತಿತರ ನಿಗದಿಪಡಿಸಿರುವ ಸೌಲಭ್ಯಗಳನ್ನೊದಗಿಸಲಾಗಿದೆ.